ಪ್ರಜಾವಾಣಿ 01/9/17

ರಸ್ತೆ ಅಗೆತ ಮೇಲುಸ್ತುವಾರಿಗೆ ಪ್ರತ್ಯೇಕ ಏಜೆನ್ಸಿ: ಸಚಿವ ಜಾರ್ಜ್ ಹೇಳಿಕೆ

# ಜಲಮಂಡಳಿ, ಬೆಸ್ಕಾಂ ರಸ್ತೆ ಅಗೆಯುವಂತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ನೀರಿನ ಪೈಪ್‌ಗಳು, ವಿದ್ಯುತ್ ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆಯುವುದರಿಂದ ಆಗುತ್ತಿರುವ ಸಮಸ್ಯೆಗಳಿಗೆ ಕಡಿವಾಣ ಹಾಕಲು ಪ್ರತ್ಯೇಕ ಏಜೆನ್ಸಿಯೊಂದನ್ನು ಸ್ಥಾಪಿಸಲು ಚಿಂತನೆ ನಡೆಸಲಾಗಿದೆ' ಎಂದು ಬೆಂಗಳೂರು ನಗರ ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ನಗರದ ಕುಮಾರ ಪಾರ್ಕ್ ಪಶ್ಚಿಮ ರೈಲ್ವೆ ರಸ್ತೆ, ಅರಮನೆ ರಸ್ತೆಗಳಲ್ಲಿ ಶನಿವಾರ ಕಾಮಗಾರಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

'ಇನ್ನು ಮುಂದೆ ಜಲಮಂಡಳಿ, ಬೆಸ್ಕಾಂ ಹಾಗೂ ಇತರ ಸರ್ಕಾರಿ ಸಂಸ್ಥೆಗಳು ಪಾಲಿಕೆಯ ಅನುಮೋದನೆ ಪಡೆದು ನಿಗದಿತ ಏಜೆನ್ಸಿಯ ಮುಖಾಂತರ ರಸ್ತೆ ಅಗೆತ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.



ಕೆ.ಜೆ.ಜಾರ್ಜ್

'ರಸ್ತೆ ಅಗೆತ ಮತ್ತು ನಂತರ ಡಾಂಬರೀಕರಣ ಕಾಮಗಾರಿಗೆ ತಗಲುವ ವೆಚ್ಚವನ್ನು ಮೊದಲು ಬಿಬಿಎಂಪಿಗೆ ಕಟ್ಟಬೇಕು. ನಂತರ ಆ ಏಜೆನ್ಸಿಯೇ ರಸ್ತೆ ಅಗೆತ ಹಾಗೂ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸುತ್ತದೆ' ಎಂದು ಅವರು ತಿಳಿಸಿದರು.

'ನಗರದಲ್ಲಿ ಜಲಮಂಡಳಿ, ಬೆಸ್ಕಾಂ ಸಂಸ್ಥೆಗಳು ರಸ್ತೆಗಳನ್ನು ಅಗೆಯುತ್ತಿವೆ. ದುರಸ್ತಿ ಕಾಮಗಾರಿ ವಿಳಂಬವಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಹಾಗಾಗಿ, ಇನ್ನು ಮುಂದೆ ರಸ್ತೆ ಅಗೆಯಲು ಈ ಸಂಸ್ಥೆಗಳಿಗೆ ಅನುಮತಿ ನೀಡುವುದಿಲ್ಲ. ಎಲ್ಲ ಕಾಮಗಾರಿಗಳು ಏಜೆನ್ಸಿಯಿಂದಲೇ ನಿರ್ವಹಿಸಬೇಕು' ಎಂದು ಹೇಳಿದರು.

ಬಾಲಬ್ರೂಯಿ ಸಮೀಪ ರಸ್ತೆ ಅಗೆತದ ಬಗ್ಗೆ ರಸ್ತೆ ಇತಿಹಾಸ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಚಿವರು ಕೇಳಿದರು. ಕಾಮಗಾರಿ ಯಾವಾಗ ಆರಂಭವಾಯಿತು. ಪೈಪುಗಳನ್ನು ಯಾವಾಗ ಅಳವಡಿಸಲಾಗಿತ್ತು ಎಂಬ ಬಗ್ಗೆ ವಿವರ ಇರಲಿಲ್ಲ. ಇದರಿಂದ ಸಿಟ್ಟಿಗೆದ್ದ ಜಾರ್ಜ್ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ನಗರದಲ್ಲಿ ಖಾಸಗಿ ಸಂಸ್ಥೆಗಳು ಕೇಬಲ್ ಅಳವಡಿಕೆಗೆ ರಸ್ತೆಗಳನ್ನು ಅಗೆಯುತ್ತಿವೆ. ಅಂತಹ ಸಂಸ್ಥೆಗಳ ಮುಖ್ಯಸ್ಥರನ್ನು ಸಭೆ ಕರೆದು ಚರ್ಚೆ ನಡೆಸುತ್ತೇನೆ ಎಂದೂ ಅವರು ತಿಳಿಸಿದರು. ಮೇಯರ್ ಜಿ.ಪದ್ಮಾವತಿ, ಆಡಳಿತ ಪಕ್ಷದ ನಾಯಕ ಮಹಮ್ಮದ್ ರಿಜ್ವಾನ್ ನವಾಬ್, ಆಯುಕ್ತ ಎನ್. ಮಂಜುನಾಥ ಪ್ರಸಾದ್ ಇದ್ದರು.

## 'ಬಿಬಿಎಂಪಿ ಮೈತ್ರಿಯಲ್ಲಿ ಹಸ್ತಕ್ಷೇಪ ಇಲ್ಲ'

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಕುರಿತು ಸಮನ್ವಯ ಸಮಿತಿ ರಚಿಸಲಾಗಿದ್ದು, ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಮೇಯರ್ ಅವರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ ರಚಿಸುವುದಕ್ಕೆ ಸರ್ಕಾರ ಈಗಾಗಲೇ ಒಪ್ಪಿಗೆ ಸೂಚಿಸಿದೆ. ಈ ಸಮಿತಿ ಸದಸ್ಯರೇ ಕುಳಿತು ಎಲ್ಲಾ ತೀರ್ಮಾನ ಕೈಗೊಳ್ಳುತ್ತಾರೆ ಎಂದು ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಮೈತ್ರಿ ಸಂಬಂಧ ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಶರವಣ ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಆದರೆ, ಬಿಬಿಎಂಪಿ ಚುನಾವಣೆ ನಂತರ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಮಲಿಂಗಾರೆಡ್ಡಿ ಮತ್ತು ದಿನೇಶ್ ಗುಂಡೂರಾವ್ ಅವರು ಮಧ್ಯಸ್ಥಿಕೆ ವಹಿಸಿದ್ದರು. ಅವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

**ಬಿಬಿಎಂಪಿ ಮೈತ್ರಿ ಸಂಬಂಧ ಸಚಿವರಾದ ಜಿ.ಪರಮೇಶ್ವರ್, ರಾಮಲಿಂಗಾರೆಡ್ಡಿ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಅವರು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ**

**ಸಿದ್ದರಾಮಯ್ಯ**
ಮುಖ್ಯಮಂತ್ರಿ

ಪ್ರಜಾವಾಣಿ 07/01/17

ಅಕ್ರಮ ಸಕ್ರಮ ಯೋಜನೆ ಅನುಷ್ಠಾನ: ರಾಜ್ಯ ಸರ್ಕಾರದಿಂದ ನಾಳೆ ಅಧಿಸೂಚನೆ ಪ್ರಕಟ

# ಅರ್ಜಿ ಸಲ್ಲಿಸಲು 4 ತಿಂಗಳು ಕಾಲಾವಕಾಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಕ್ರಮ ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಕೆಗೆ 4 ತಿಂಗಳ ಕಾಲಾವಕಾಶ ನೀಡಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಚಿವರು, ಬಿಬಿಎಂಪಿ ಮೇಯರ್, ಮತ್ತು ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಭೆ ನಂತರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರು, '2013ರ ಅಕ್ಟೋಬರ್ 19ಕ್ಕಿಂತ ಮುಂಚಿತವಾಗಿ ಅಕ್ರಮವಾಗಿ ವಾಸದ ಮನೆಗಳು, ವಾಣಿಜ್ಯ ಕಟ್ಟಡ ಕಟ್ಟಿಕೊಂಡವರು ಮತ್ತು ಬಡಾವಣೆ ನಿರ್ಮಿಸಿದವರು ಅರ್ಜಿ ಸಲ್ಲಿಸಿ ಸಕ್ರಮ ಮಾಡಿಕೊಳ್ಳಬಹುದು. ಈ ಸಂಬಂಧ ಸೋಮವಾರ (ಜ.2) ಅಧಿಸೂಚನೆ ಹೊರಡಿಸಲಾಗುವುದು' ಎಂದು ಹೇಳಿದರು.

'ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ತಿದ್ದುಪಡಿ'ಗೆ ತಂದು 2014ಲ್ಲಿ ಹೊರಡಿಸಿದ್ದ ಅಧಿಸೂಚನೆ ವಿರುದ್ಧ ಕೆಲವರು ಹೈಕೋರ್ಟ್‌ಗೆ ಹೋಗಿದ್ದರು. ಆದರೆ, ಸರ್ಕಾರದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ ಎಂದರು.

ಅಕ್ರಮ ಆಸ್ತಿಯನ್ನು ಸಕ್ರಮಗೊಳಿಸಲು ದಂಡ ಶುಲ್ಕದಲ್ಲಿ ಯಾವುದೇ ಬದಲಾವಣೆ ಇಲ್ಲ. 2013ರ ತಿದ್ದುಪಡಿ ಕಾಯಿದೆಗೆ ನಿಯಮಾವಳಿ ರೂಪಿಸುವಾಗ ಎಷ್ಟು ಶುಲ್ಕ ನಿಗದಿ ಮಾಡಲಾಗಿತ್ತೋ ಅದೇ ಮುಂದುವರಿಯಲಿದೆ ಎಂದರು.

ಅರ್ಜಿಗಳನ್ನು ಆನ್‌ಲೈನ್ ಮೂಲಕ ಮತ್ತು ಖುದ್ದಾಗಿಯೂ ಸಲ್ಲಿಸಬಹುದು.

ಗ್ರಾಮೀಣ ಪ್ರದೇಶದವರಿಗೂ ಅನುಕೂಲ ಆಗಲಿ ಎಂಬ ದೃಷ್ಟಿಯಿಂದ ಎರಡೂ ಬಗೆಯ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಜನರಿಗೆ ಒಂದು ಅಥವಾ ಎರಡು ಆಸ್ತಿಗಳು ಇರುತ್ತವೆ. ಹೀಗಾಗಿ ಅರ್ಜಿ ಸಲ್ಲಿಸಲು ನಾಲ್ಕು ತಿಂಗಳಿಗಿಂತ ಹೆಚ್ಚಿನ ಸಮಯ ಅಗತ್ಯವಿಲ್ಲ ಎಂದರು.

ಅಕ್ರಮ ಸಕ್ರಮದಿಂದ ಎಷ್ಟು ಆದಾಯ ಸಂಗ್ರಹವಾಗುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ನಾಲ್ಕು ತಿಂಗಳು ಕಳೆದ ನಂತರ ಅರ್ಜಿಗಳು ಎಷ್ಟು ಬಂದಿವೆ ಎಂಬುದರ ಆಧಾರದ ಮೇಲೆ ಆದಾಯ ಎಷ್ಟು ಎಂದು ನಿರ್ಧಾರವಾಗಲಿದೆ ಎಂಬ ಪ್ರಶ್ನೆಗೆ ಸಚಿವ ಜಾರ್ಜ್ ಉತ್ತರಿಸಿದರು.

**ಸಚಿವರಿಗೆ ಜವಾಬ್ದಾರಿ:** ಅಕ್ರಮ ಸಕ್ರಮ ಯೋಜನೆ ಅನುಷ್ಠಾನದ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳು ಮೂವರು ಸಚಿವರಿಗೆ ವಹಿಸಿದ್ದಾರೆ ಎಂದು ಪೌರಾಡಳಿತ ಸಚಿವ ಈಶ್ವರ ಖಂಡ್ರೆ ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಚಿವ ಕೆ.ಜೆ. ಜಾರ್ಜ್, 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನಗರಾಭಿವೃದ್ಧಿ ಸಚಿವ ರೋಷನ್‌ಬೇಗ್ ಮತ್ತು 260 ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯನ್ನು ತಮಗೆ ವಹಿಸಿದ್ದಾರೆ ಎಂದೂ ಅವರು ವಿವರಿಸಿದರು.

ಅಕ್ರಮ ಆಸ್ತಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಕೂಡಲೇ ಆರಂಭ ಆಗಲಿದೆ. ನಿಯಮಗಳಲ್ಲಿ ಯಾವುದೇ ಬದಲಾವಣೆ ಇಲ್ಲ. 2013ರ ಕಾಯ್ದೆಯನ್ನು ಯಥಾವತ್ ಅನುಷ್ಠಾನಗೊಳಿಸಲಾಗುವುದು ಎಂದು ಅವರು ಹೇಳಿದರು.

**ಬಿಬಿಎಂಪಿ ವ್ಯಾಪ್ತಿಯಲ್ಲಿ ಸೂಕ್ತ ವ್ಯವಸ್ಥೆ:** ಬಿಬಿಎಂಪಿ ವ್ಯಾಪ್ತಿಯಲ್ಲಿನ ನಿವಾಸಿಗಳು ಅಕ್ರಮ ಸಕ್ರಮದಡಿ ಅರ್ಜಿ ಸಲ್ಲಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮೇಯರ್ ಜಿ. ಪದ್ಮಾವತಿ ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

## ವ್ಯಾಪ್ತಿಗೆ ಬಾರದಿರುವುದು

- ಕೆರೆ ಅಂಗಳ
- ನದಿ ಪಾತ್ರಗಳು
- ಉದ್ಯಾನಗಳು
- ಹೈ ಟೆನ್ಷನ್ ವಿದ್ಯುತ್ ತಂತಿಗಳ ಕೆಳಗೆ
- ನಾಗರಿಕ ಉಪಯೋಗಕ್ಕೆ ಮೀಸಲಿರಿಸಿದ ನಿವೇಶನಗಳು
- ಸಮುದ್ರ ತೀರ ನಿಯಂತ್ರಣ ವಲಯ

## ವ್ಯಾಪ್ತಿಗೆ ಬರುವುದು

- ಸೆಟ್‌ಬ್ಯಾಕ್, ಫ್ಲೋರ್ ಏರಿಯಾ ರೇಷಿಯೊ ಮತ್ತು ಸ್ಥಳೀಯ ನಗರ ಸಂಸ್ಥೆಗಳಿಂದ ಅನುಮೋದಿಸಿದ ಯೋಜನಾ ನಕ್ಷೆ ಉಲ್ಲಂಘಿಸಿ ಕಟ್ಟಿದ ವಸತಿ ಮತ್ತು ವಾಣಿಜ್ಯ ಕಟ್ಟಡಗಳು ಕಟ್ಟಡಗಳು
- ಭೂ ಪರಿವರ್ತನೆ ಆಗದ ನಗರ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಿಸಿದ ಬಡಾವಣೆಗಳು

## ಉಲ್ಲಂಘನೆಗೆ ದಂಡ ಎಷ್ಟು?

ವಸತಿ ಕಟ್ಟಡಗಳಲ್ಲಿ ಶೇ 25ವರೆಗೆ ಸೆಟ್ ಬ್ಯಾಕ್ ಮತ್ತು ಫ್ಲೋರ್ ಏರಿಯಾ ರೇಷಿಯೋ (ಎಫ್‌ಎಆರ್) ಉಲ್ಲಂಘನೆಯಾಗಿದ್ದರೆ ಮಾರುಕಟ್ಟೆ ದರದ ಶೇ 6ರಷ್ಟು ದಂಡ.

ಶೇ 25ರಿಂದ ಶೇ 50ರವರೆಗೆ ಸೆಟ್ ಬ್ಯಾಕ್ ಮತ್ತು ಎಫ್ ಎ ಆರ್ ಉಲ್ಲಂಘನೆಯಾಗಿದ್ದರೆ ಮಾರುಕಟ್ಟೆ ದರದ ಶೇ 8 ರಷ್ಟು ದಂಡ.

ವಸತಿಯೇತರ ಕಟ್ಟಡಗಳಲ್ಲಿ ಶೇ 12.50 ರಷ್ಟು ಸೆಟ್ ಬ್ಯಾಕ್, ಎಫ್ ಎ ಆರ್ ಉಲ್ಲಂಘನೆಯಾಗಿದ್ದರೆ ಮಾರುಕಟ್ಟೆ ದರದ ಶೇ 20 ರಷ್ಟು ದಂಡ.

ಶೇ12.50 ರಿಂದ ಶೇ 25ವರೆಗೆ ಸೆಟ್ ಬ್ಯಾಕ್, ಎಫ್ ಎಆರ್ ಉಲ್ಲಂಘನೆಯಾಗಿದ್ದರೆ ಮಾರುಕಟ್ಟೆ ದರದ ಶೇ 35ರಷ್ಟು ದಂಡ.

ವಸತಿ ಕಟ್ಟಡಗಳಲ್ಲಿ ಶೇ 50ಕ್ಕಿಂತ ಹಾಗೂ ವಸತಿಯೇತರ ಕಟ್ಟಡಗಳಲ್ಲಿ ಶೇ 25 ಕ್ಕಿಂತ ಹೆಚ್ಚಿನ ಸೆಟ್ ಬ್ಯಾಕ್ ಹಾಗೂ ಎಫ್ ಎಆರ್ ಉಲ್ಲಂಘಿಸಿದ್ದರೆ ಸಕ್ರಮ ಮಾಡಲು ಅವಕಾಶ ಇಲ್ಲ. ಅವುಗಳನ್ನು ನಿಯಮದಂತೆ ಕೆಡವಬೇಕಾಗುತ್ತದೆ.